# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು/ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಉಪನ್ಯಾಸಕರ/ಶಿಕ್ಷಕರ ಹುದ್ದೆಗಳನ್ನು ತುಂಬಿಕೊಳ್ಳಲು ಮತ್ತು ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ:- 1) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಏಕ ಕಡತ ಸಂಖ್ಯೆ :ಪಪೂಶಿಇ/ಸಿ-2/ನೇಮಕ/75/2013-14.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಏಕ ಕಡತ ಸಂಖ್ಯೆ :ಸಿ3(1) ಪ್ರಾಶಿನೇ 15/2011-12 ದಿನಾಂಕ :30-05-2013.

**ಪ್ರಸ್ತಾವನೆ :**

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ :31-05-2013ರವರೆಗೆ ಒಟ್ಟು 1130 ಹುದ್ದೆಗಳು ಖಾಲಿ ಇರುತ್ತವೆ. ಸದರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಮತ್ತು ಈ ಹುದ್ದೆಗಳನ್ನು ಬಡ್ತಿ ಹಾಗೂ ನೇರ ನೇಮಕಾತಿ ಮೂಲಕ ತುಂಬಿಕೊಳ್ಳುವವರೆಗೆ ಈ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಮೇಲೆ (1)ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 4000 ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರದ ಅನುಮತಿ ನೀಡಲಾಗಿದ್ದರೂ, ವಿವಿಧ ಕಾರಣಗಳಿಂದ ನೇಮಕಾತಿ ಪ್ರಕ್ರಿಯೆ ನಡೆಸಲು ಸಾಧ್ಯವಾಗಿಲ್ಲ. ಇದಲ್ಲದೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 10875 ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮತ್ತು ಸದರಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮೇಲೆ (2)ರಲ್ಲಿ ಓದಲಾದ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 1137 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮತ್ತು ಸದರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವವರೆಗೆ ಈ ಹುದ್ದೆಗಳಿಗೆ ಅತಿಥಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ರಾಜ್ಯದ ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿರಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 87 ಯೋಯೋಕ 2013 ಬೆಂಗಳೂರು, ದಿನಾಂಕ:14/08/2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಈ ಕೆಳಕಂಡಂತೆ ಸರ್ಕಾರದ ಅನುಮತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ | ಭರ್ತಿ ಮಾಡಲು ಅನುಮತಿ ನೀಡಲಾದ ಹುದ್ದೆಗಳ ಸಂಖ್ಯೆ |
|---|---|---|
| 1. | **ಪ್ರಾಥಮಿಕ ಶಾಲಾ ಸಹ ಶಿಕ್ಷಕರು** | 5405 (ಈ ಹಿಂದೆ ತುಂಬಲು ಅನುಮತಿ ನೀಡಲಾದ 4000 ಹುದ್ದೆಗಳನ್ನು ಹೊರತುಪಡಿಸಿ) |

| | | |
|---|---|---|
| 2. | ಪ್ರೌಢ ಶಾಲಾ ಸಹ ಶಿಕ್ಷಕರು | 1137 |
| 3. | ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು | 1130 |

ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ಮಾರ್ಚ್ 2014ರವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗಳನ್ವಯ ಈ ಕೆಳಕಂಡಂತೆ ಅತಿಥಿ ಶಿಕ್ಷಕರನ್ನು/ಉಪನ್ಯಾಸಕರನ್ನು, ಸಂಪೂರ್ಣವಾಗಿ ಅಡ್-ಹಾಕ್ ವ್ಯವಸ್ಥೆಯಡಿ ಆಯ್ಕೆ ಮಾಡಿಕೊಳ್ಳಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಅನುಮತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ | ಅತಿಥಿ ಶಿಕ್ಷಕ/ಉಪನ್ಯಾಸಕರನ್ನು ಭರ್ತಿ ಮಾಡಲು ಅನುಮತಿ ನೀಡಲಾದ ಹುದ್ದೆಗಳ ಸಂಖ್ಯೆ |
|---|---|---|
| 1. | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 9405 (ಈ ಹಿಂದೆ ತುಂಬಲು ಅನುಮತಿ ನೀಡಲಾದ 4000 ಹುದ್ದೆಗಳನ್ನು ಸೇರಿಸಿ) |
| 2. | ಪ್ರೌಢ ಶಾಲಾ ಸಹ ಶಿಕ್ಷಕರು | 1137 |
| 3. | ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು | 1130 |

**ಷರತ್ತುಗಳು :**

1) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ ಎಲ್ಲಾ ಜಿಲ್ಲೆಗಳಲ್ಲಿ ಸಮಾನವಾಗಿ ಇಲ್ಲದಿರುವುದರಿಂದ ಮತ್ತು ಕೆಲವು ಜಿಲ್ಲೆಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡು ಬಂದಿರುವುದರಿಂದ ಶಿಕ್ಷಕರನ್ನು ಮರು ಹಂಚಿಕೆ ಮಾಡಲು ತುರ್ತಾಗಿ ಕ್ರಮ ಕೈಗೊಳ್ಳುವುದು.
2) ಶಿಕ್ಷಕರ ನೇಮಕಾತಿ ಹಾಗೂ ಶಾಲಾವಾರು ಹಂಚಿಕೆ ಬಗೆಗಿನ ನೀತಿಗಳನ್ನು ಇಲಾಖೆ ಸುಧಾರಿಸುವ ಕ್ರಮವಾಗಿ (Rationalite) ಮಾಡುವುದು.
3) ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಕಂಡುಬಂದಿದ್ದು, ಅವಶ್ಯಕತೆ ಇರುವ ಕಡೆ ಮರು ಹಂಚಿಕೆ ಮಾಡುವುದು.
4) ಶಿಕ್ಷಕರ ಸಂಪನ್ಮೂಲವನ್ನು ಹೆಚ್ಚು ಆರ್ಥಿಕವಾಗಿ, ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
5) ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿ ಇರುವ ಶಿಕ್ಷಕರನ್ನು ಕೊರತೆ ಇರುವ ಸರ್ಕಾರಿ ಶಾಲೆಗಳಲ್ಲಿ (O.O.D) ಆಧಾರದ ಮೇಲೆ ಹಂಚಿಕೆ ಮಾಡುವುದು.
6) ಕೊರತೆ ಇರುವ ಶಾಲೆಗಳಿಗೆ ಹೆಚ್ಚುವರಿ ಇರುವ ಶಾಲೆಗಳಿಂದ ಶಿಕ್ಷಕರನ್ನು ಕೂಡಲೇ ಮರು ವಿನ್ಯಾಸಿಸಲು ಕ್ರಮ ವಹಿಸುವುದು.
7) ಅತಿಥಿ ಶಿಕ್ಷಕರ/ಉಪನ್ಯಾಸಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ/ ಡಿ.ಡಿ.ಪಿ.ಯುಗಳಿಗೆ ವಹಿಸುವುದು.
8) ಪ್ರಾಥಮಿಕ ಶಾಲಾ ಶಿಕ್ಷಕರ ಗೌರವ ಧನ ಮಾಹೆಯಾನ ರೂ. 5500/-, ಪ್ರೌಢ ಶಾಲಾ ಶಿಕ್ಷಕರ ಗೌರವ ಧನ ಮಾಹೆಯಾನ ರೂ. 6000/- ಹಾಗೂ ಪದವಿ ಪೂರ್ವ ಉಪನ್ಯಾಸಕರ ಗೌರವ ಧನ ಮಾಹೆಯಾನ ರೂ. 7000/-

9) ಅತಿಥಿ ಶಿಕ್ಷಕರ ಆಯ್ಕೆ ಬಗ್ಗೆ ಹಾಗೂ ನೇಮಕದ ಬಗ್ಗೆ ಘಟನಾವಳಿಗಳ ಕ್ಯಾಲೆಂಡರ್ ಸಿದ್ಧಪಡಿಸುವುದು.

10) ಅತಿಥಿ ಶಿಕ್ಷಕರನ್ನು/ಉಪನ್ಯಾಸಕರನ್ನು ಆಯಾ ಹುದ್ದೆಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ, ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡುವುದು. ಈ ಹಿಂದೆ ಕಾರ್ಯನಿರ್ವಹಿಸಿದವರಿಗೆ ಆದ್ಯತೆ ನೀಡುವುದು.

11) ಅತಿಥಿ ಶಿಕ್ಷಕರನ್ನು/ ಉಪನ್ಯಾಸಕರನ್ನು ಕಾರ್ಯಭಾರವಿಲ್ಲದೇ ನಿಯಮಬಾಹಿರವಾಗಿ ಆಯ್ಕೆ ಮಾಡಿದ್ದಲ್ಲಿ, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಡಿ.ಡಿ.ಪಿ.ಯುಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

12) ಶಿಕ್ಷಕರೆ ಇಲ್ಲದಿರುವ ಶಾಲಾ ಕಾಲೇಜುಗಳಲ್ಲಿ ಹಾಗೂ ನಿಯೋಜನೆಯಂತಹ ಬದಲಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದಿರುವ ಸ್ಥಳದಲ್ಲಿ ಮಾತ್ರ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಬಿ. ಪಟಗಾರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಸಾಮಾನ್ಯ).

ಇವರಿಗೆ:-

1. ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ.
5. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು(ಆಯುಕ್ತರ ಮೂಲಕ).
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು(ಆಯುಕ್ತರ ಮೂಲಕ).
9. ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆ/ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ/(ಆಯುಕ್ತರ ಮೂಲಕ).
10. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

# ಅತಿಥಿ ಶಿಕ್ಷಕರ ತಾತ್ಕಾಲಿಕ ನೇಮಕಾತಿಗೆ ಅರ್ಜಿ ನಮೂನೆ

(ಪ್ರಾಥಮಿಕ/ಪ್ರೌಢ ಶಾಲೆ)

| | | |
|---|---|---|
| 1 | ಅಭ್ಯರ್ಥಿಯ ಹೆಸರು<br>(ದಪ್ಪ ಅಕ್ಷರಗಳಲ್ಲಿ) | |
| 2 | ತಂದೆಯ ಹೆಸರು | |
| 3 | ಜನ್ಮ ದಿನಾಂಕ | |
| 4 | ವಿದ್ಯಾರ್ಹತೆ<br>(ಪ್ರಾಥಮಿಕ/ಪ್ರೌಢಶಾಲೆ) ದೃಢೀಕೃತ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿ ಲಗತ್ತಿಸುವುದು | |
| 5 | ಅರ್ಜಿದಾರ ಶಿಕ್ಷಕರ ಅಂಚೆ ವಿಳಾಸ | |
| 6 | ಅರ್ಜಿದಾರ ಶಿಕ್ಷಕರ ಖಾಯಂ ವಿಳಾಸ | |
| 7 | ತಾಲ್ಲೂಕಿನ ಶಾಲೆಗಳಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುವ ಶಾಲೆಗಳ ಆದ್ಯತಾ ಪಟ್ಟಿ | 1)<br>2)<br>3)<br>4)<br>5) |
| 8 | 2012–13ನೇ ಸಾಲಿನಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದಲ್ಲಿ ವಿವರ<br>(ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು) | |

ಅಭ್ಯರ್ಥಿಯ ಹೆಸರು ಮತ್ತು ಸಹಿ

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು – 560 001.**

ಸಂಖ್ಯೆ:ಸಿ4[1]/ಸಿ3[1]ಅ.ಶಿ.ನೇ: 01/2013–14 ದಿನಾಂಕ:–22.08.2013

**ಜ್ಞಾಪನ**

ವಿಷಯ: ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ 87 ಯೋಯೋಕ 2013 ದಿನಾಂಕ:14.08.2013

2. ಈ ಕಛೇರಿಯ ಜ್ಞಾಪನ ಸಂಖ್ಯೆ:ಸಿ4(1)ಪ್ರೌ.ಶಿ.ಅ.ನೇ–01/08–09 ದಿ:03.08.2012

—000—

ಉಲ್ಲೇಖ–1ರ ಸರ್ಕಾರದ ಆದೇಶದಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ಮಾರ್ಚ್ 2014ರವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಕೆಲವು ಷರತ್ತಿಗೊಳಪಡಿಸಿ ಸಂಪೂರ್ಣವಾಗಿ ಅಡ್–ಹಾಕ್ ವ್ಯವಸ್ಥೆಯಡಿ ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿ ನೀಡಿದೆ. ಸರ್ಕಾರದ ಆದೇಶದ ಪ್ರತಿಯನ್ನು ಈ ಜ್ಞಾಪನದೊಂದಿಗೆ ಲಗತ್ತಿಸಿದೆ.

ಆದೇಶದಲ್ಲಿ ತಿಳಿಸಿರುವ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸಲು ಈ ಮೂಲಕ ತಿಳಿಸಿದೆ. ಯಾವುದೇ ಲೋಪಗಳಾದಲ್ಲಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಉಲ್ಲೇಖ–2 ರ ಈ ಕಛೇರಿಯ ಹಿಂದಿನ ಜ್ಞಾಪನದಂತೆ ಅತಿಥಿ ಶಿಕ್ಷಕರ ಹಾಜರಾತಿ ಕುರಿತು ಪ್ರತ್ಯೇಕ ಹಾಜರಾತಿ ವಹಿ ಮತ್ತು ಗೌರವಧನ ಪಾವತಿ ಬಗ್ಗೆ ಅಳವಡಿಸಿರುವ ಪದ್ಧತಿಯನ್ನೇ ಮುಂದುವರೆಸುವುದು.

ಸರ್ಕಾರದ ಆದೇಶದ ಷರತ್ತಿನ ಕ್ರಮಸಂಖ್ಯೆ 1, 5 ಮತ್ತು 6 ರಲ್ಲಿ ತಿಳಿಸಿರುವಂತೆ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಮರುಹಂಚಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಗತ್ಯವಿರುವ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಜರೂರು ಕ್ರಮ ಕೈಗೊಳ್ಳಲು ತಿಳಿಸಿದೆ. ಅನುದಾನಿತ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ಬಗ್ಗೆ ಪೂರ್ಣಗೊಂಡನಂತರ ಅಗತ್ಯವಿರುವ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಜರೂರು ಕ್ರಮಕೈಗೊಳ್ಳಲು ತಿಳಿಸಿದೆ. 2011–12ನೇ ಸಾಲಿನಲ್ಲಿ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಪ್ರಕ್ರಿಯೆ ಬಗ್ಗೆ ನೀಡಲಾಗಿದ್ದ ನಿರ್ದೇಶನದಂತೆಯೇ ಕ್ರಮವಹಿಸುವುದು.

ಈ ಸಂಬಂಧ ದಿನಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ಮತ್ತು ಇಲಾಖಾ ವೆಬ್–ಸೈಟ್ ನಲ್ಲಿ ಪ್ರಕಟಣೆ ನೀಡಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳಿಗೆ ಹಂಚಿಕೆ ಮಾಡಿರುವ ಅತಿಥಿ ಶಿಕ್ಷಕರ ಜಿಲ್ಲಾವಾರು ಹುದ್ದೆಗಳ ಸಂಖ್ಯೆಯ ಮಾಹಿತಿಯನ್ನು **ಅನುಬಂಧ–ಅ** ನಲ್ಲಿ ಹಾಗೂ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹಂಚಿಕೆ ಮಾಡಿರುವ ಅತಿಥಿ ಶಿಕ್ಷಕರ ಜಿಲ್ಲಾವಾರು ಹುದ್ದೆಗಳ ಸಂಖ್ಯೆಯ ಮಾಹಿತಿಯನ್ನು **ಅನುಬಂಧ–ಆ** ನಲ್ಲಿ ಲಗತ್ತಿಸಿದೆ.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ:–

1. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು.
4. ಕಛೇರಿ ಪ್ರತಿ

ಅನುಬಂಧ-ಅ

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ಬಳಸಿಕೊಳ್ಳಲು ಜಿಲ್ಲಾವಾರು ಹುದ್ದೆಗಳ ಹಂಚಿಕೆ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಹಂಚಿಕೆ ಮಾಡಿರುವ ಅತಿಥಿ ಶಿಕ್ಷಕರ ಸಂಖ್ಯೆ |
|---|---|---|
| 1 | ಬೆಂಗಳೂರು ಉತ್ತರ | 06 |
| 2 | ಬೆಂಗಳೂರು ದಕ್ಷಿಣ | 15 |
| 3 | ಬೆಂಗಳೂರು ಗ್ರಾ | 08 |
| 4 | ರಾಮನಗರ | 24 |
| 5 | ಕೋಲಾರ | 53 |
| 6 | ಮಧುಗಿರಿ | 43 |
| 7 | ಚಿಕ್ಕಬಳ್ಳಾಪುರ | 32 |
| 8 | ತುಮಕೂರು | 59 |
| 9 | ಶಿವಮೊಗ್ಗ | 37 |
| 10 | ದಾವಣಗೆರೆ | 36 |
| 11 | ಚಿತ್ರದುರ್ಗ | 26 |
| 12 | ಮೈಸೂರು | 67 |
| 13 | ಚಾಮರಾಜನಗರ | 17 |
| 14 | ಮಂಡ್ಯ | 27 |
| 15 | ಹಾಸನ | 40 |
| 16 | ಚಿಕ್ಕಮಗಳೂರು | 08 |
| 17 | ಕೊಡಗು | 17 |
| 18 | ದಕ್ಷಿಣ ಕನ್ನಡ | 62 |
| 19 | ಉಡುಪಿ | 11 |
| 20 | ಬೆಳಗಾವಿ | 13 |
| 21 | ಚಿಕ್ಕೋಡಿ | 19 |
| 22 | ಬಾಗಲಕೋಟೆ | 12 |
| 23 | ಬಿಜಾಪುರ | 08 |
| 24 | ಧಾರವಾಡ | 24 |
| 25 | ಗದಗ | 04 |
| 26 | ಹಾವೇರಿ | 32 |
| 27 | ಕಾರವಾರ | 06 |
| 28 | ಶಿರಸಿ | 13 |
| 29 | ಗುಲ್ಬರ್ಗಾ | 140 |
| 30 | ಬೀದರ್ | 11 |
| 31 | ಬಳ್ಳಾರಿ | 104 |
| 32 | ಕೊಪ್ಪಳ | 117 |
| 33 | ರಾಯಚೂರು | 40 |
| 34 | ಯಾದಗಿರಿ | 06 |
| | **ಒಟ್ಟು** | 1137 |

## ಅನುಬಂಧ- 8

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ನೇಮಕಾತಿಗೆ ಅವಶ್ಯವಿರುವ ಹುದ್ದೆಗಳ ವಿವರ.

| ಕ್ರ.ಸಂ | ಜಿಲ್ಲೆಯ ಹೆಸರು | ನೇಮಕಾತಿಗೆ ಮೊದಲು ಹಂಚಿಕೆ ಮಾಡಿರುವ ಹುದ್ದೆಗಳು | ಹೆಚ್ಚುವರಿಯಾಗಿ ನೇಮಕಾತಿಗೆ ಹಂಚಿಕೆ ಮಾಡಿರುವ ಹುದ್ದೆಗಳು. | ಒಟ್ಟು ನೇಮಕಾತಿಗೆ ಹಂಚಿಕೆ ಮಾಡಿರುವ ಹುದ್ದೆಗಳು. |
|---|---|---|---|---|
| 01 | ಬೆಂಗಳೂರು ಉತ್ತರ | – | 100 | 100 |
| 02 | ಬೆಂಗಳೂರು ದಕ್ಷಿಣ | – | 150 | 150 |
| 03 | ಬೆಂಗಳೂರು ಗ್ರಾ | – | 150 | 150 |
| 04 | ರಾಮನಗರ ಜಿಲ್ಲೆ | 160 | 190 | 350 |
| 05 | ಚಿಕ್ಕಬಳ್ಳಾಪುರ ಜಿಲ್ಲೆ | 100 | 140 | 240 |
| 06 | ಕೋಲಾರ ಜಿಲ್ಲೆ | 60 | 130 | 190 |
| 07 | ಶಿವಮೊಗ್ಗ ಜಿಲ್ಲೆ | 150 | 200 | 350 |
| 08 | ಚಿತ್ರದುರ್ಗ ಜಿಲ್ಲೆ | 60 | 140 | 200 |
| 09 | ದಾವಣಗೆರೆ ಜಿಲ್ಲೆ | 40 | 90 | 130 |
| 10 | ಮಧುಗಿರಿ ಜಿಲ್ಲೆ | 90 | 120 | 210 |
| 11 | ತುಮಕೂರು ಜಿಲ್ಲೆ | 60 | 100 | 160 |
| 12 | ಚಾಮರಾಜನಗರ | 100 | 140 | 240 |
| 13 | ಉಡುಪಿ ಜಿಲ್ಲೆ | – | 100 | 100 |
| 14 | ಮಂಡ್ಯ ಜಿಲ್ಲೆ | 60 | 140 | 200 |
| 15 | ಚಿಕ್ಕಮಗಳೂರು | 70 | 100 | 170 |
| 16 | ಮೈಸೂರು ಜಿಲ್ಲೆ | 70 | 130 | 200 |
| 17 | ಹಾಸನ ಜಿಲ್ಲೆ | 70 | 150 | 220 |
| 18 | ಕೊಡಗು ಜಿಲ್ಲೆ | 20 | 100 | 120 |
| 19 | ಮಂಗಳೂರು ಜಿಲ್ಲೆ | 100 | 150 | 250 |
| 20 | ಬೆಳಗಾವಿ ಜಿಲ್ಲೆ | 110 | 190 | 300 |
| 21 | ಹಾವೇರಿ ಜಿಲ್ಲೆ | 60 | 100 | 160 |
| 22 | ಶಿರಸಿ ಜಿಲ್ಲೆ | 210 | 170 | 380 |
| 23 | ಬಾಗಲಕೋಟೆ ಜಿಲ್ಲೆ | 120 | 130 | 250 |
| 24 | ಗದಗ್ ಜಿಲ್ಲೆ | 40 | 110 | 150 |
| 25 | ಚಿಕ್ಕೋಡಿ ಜಿಲ್ಲೆ | 400 | 300 | 700 |
| 26 | ಬಿಜಾಪುರ ಜಿಲ್ಲೆ | 130 | 150 | 280 |
| 27 | ಧಾರವಾಡ | 15 | 120 | 135 |
| 28 | ಉತ್ತರ ಕನ್ನಡ ಜಿಲ್ಲೆ | 30 | 90 | 120 |
| 29 | ಬಳ್ಳಾರಿ ಜಿಲ್ಲೆ | 270 | 280 | 550 |
| 30 | ಗುಲ್ಬರ್ಗಾ ಜಿಲ್ಲೆ | 230 | 220 | 450 |
| 31 | ಬೀದರ್ ಜಿಲ್ಲೆ | 200 | 250 | 450 |
| 32 | ಕೊಪ್ಪಳ ಜಿಲ್ಲೆ | 225 | 225 | 450 |
| 33 | ಯಾದಗಿರಿ ಜಿಲ್ಲೆ | 450 | 300 | 750 |
| 34 | ರಾಯಚೂರು ಜಿಲ್ಲೆ | 300 | 250 | 550 |
| | ಒಟ್ಟು | 4000 | 5405 | 9405 |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

## ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಲು ವೇಳಾಪಟ್ಟಿ

| ಕ್ರ.ಸಂ | ಪಾಲಿಸಬೇಕಾದ ಕ್ರಮದ ವಿವರ | ದಿನಾಂಕ |
|---|---|---|
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಅರ್ಹ ಅಭ್ಯರ್ಥಿಗಳ ನೋಂದಣಿ | ದಿನಾಂಕ:-26.08.2013 ರಿಂದ ದಿನಾಂಕ:-31.08.2013ರವರೆಗೆ |
| 2 | ಅರ್ಜಿಗಳ ಪರಿಶೀಲನೆ | ದಿನಾಂಕ:-02.09.2013 ರಿಂದ ದಿನಾಂಕ:-04.09.2013ರವರೆಗೆ |
| 3 | ಆಯ್ಕೆ ಪಟ್ಟಿ ಪ್ರಕಟಣೆ | ದಿನಾಂಕ:-06.09.2013 |
| 4 | ತಾತ್ಕಾಲಿಕ ಅತಿಥಿ ಶಿಕ್ಷಕರ ಸ್ಥಳ ನಿಯುಕ್ತಿ ಆದೇಶ ನೀಡುವುದು | ದಿನಾಂಕ:-09.09.20013 |